# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 | ENGLISH DAILY | Subscription Yearly - Rs. - | THURSDAY | 11-5-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಮಲೇಶಿಯನ್ ಪಾಮೆಣ್ಣೆ ದಾಸ್ತಾನು, ಉತ್ಪಾದನೆ ಇಳಿಕೆ

ಮಲೇಶಿಯಾದ ಪಾಮೆಣ್ಣೆ ದಾಸ್ತಾನು ಮಾರ್ಚನಲ್ಲಿದ್ದ 1.67 ಮಿಲಿಯನ್ ಟನ್‌ಗಳಿಂದ 10.54 ಶೇಕಡಾ ಇಳಿಕೆಯಾಗಿ ಎಪ್ರಿಲ್ ಆರಂಭಕ್ಕೆ 1.50 ಮಿಲಿಯನ್ ಟನ್‌ಗಳಾಗಿವೆಯೆಂದು ಮಲೇಶಿಯನ್ ಪಾಮೆಣ್ಣೆ ಬೋರ್ಡ್ (MPOB) ಪ್ರಕಟಿಸಿದೆ. ಕಚ್ಚಾ ಪಾಮೆಣ್ಣೆ ದಾಸ್ತಾನು ಮಾರ್ಚ್ 891,961 ಟನ್‌ಗಳಿಂದ 6.53 ಶೇಕಡಾ ಇಳಿಕೆಯಾಗಿ 833,677 ಟನ್‌ಗಳಾಗಿವೆ. ಸಂಸ್ಕರಿತ ಪಾಮೆಣ್ಣೆ ದಾಸ್ತಾನು 782,061 ಟನ್‌ಗಳಿಂದ 663,858 ಟನ್‌ಗಳಿಗೆ ಇಳಿಕೆಯಾಗಿದೆಯೆನ್ನಲಾಗಿದೆ. ಕಚ್ಚಾ ಪಾಮೆಣ್ಣೆ (CPO) ಉತ್ಪಾದನೆ 1.29 ಮಿಲಿಯನ್ ಟನ್ (ಮಾರ್ಚ್) ಗಳಿಂದ ಎಪ್ರಿಲ್ ನಲ್ಲಿ 1.20 ಮಿಲಿಯನ್ ಟನ್‌ಗಳಿಗೆ ಇಳಿಕೆಹೊಂದಿದೆ. ಪಾಮೆಣ್ಣೆ ತಿರುಳು ಉತ್ಪಾದನೆ 323,743 ಟನ್ 9.36 ಶೇಕಡಾ ಇಳಿಕೆಯಾಗಿ 293,454 ಟನ್‌ಗಳಾಗಿವೆ. ಪಾಮೆಣ್ಣೆ ರಫ್ತು ಮಾರ್ಚ್‌ನ 1.49 ಮಿಲಿಯನ್ ಟನ್‌ಗಳಿಂದ ಎಪ್ರಿಲ್‌ನಲ್ಲಿ 27–78 ಶೇಕಡಾ ಇಳಿಕೆಯಾಗಿ 1.07 ಮಿಲಿಯನ್ ಟನ್‌ಗಳಾಗಿವೆ. 2023 ರ ದ್ವಿತೀಯಾರ್ಧದಲ್ಲಿ ಪ್ರತಿಕೂಲ ಹವಾಮಾನದಿಂದ ಉತ್ಪಾದನೆ ಇಳಿಕೆಯ ಪರಿಣಾಮವಾಗಿ ದರ ಗಣನೀಯ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಮಲೇಶಿಯನ್ ಪಾಮೆಣ್ಣೆ ದರ ಟನ್‌ಗೆ 42 ರಿಂಗಿಟ್ಸ್ (1.2 ಶೇಕಡಾ) ಹೆಚ್ಚಳದೊಂದಿಗೆ 3804 ರಿಂಗಿಟ್ಸ್ ($ 857.72) ಆಗಿದೆಯೆನ್ನಲಾಗಿದೆ.

### ತೊಗರಿ,ಉದ್ದು ಮಾನ್ಮಾರ್‌ನ ಖಾಸಗಿ ವರ್ತಕರು ಪರಿಸ್ಥಿತಿಯ ಲಾಭ ಪಡೆದರೆ ಸರಕಾರಿ ಮಟ್ಟದ ಖರೀದಿ

ಭಾರತದಲ್ಲಿ ತೊಗರಿ, ಉದ್ದು ಅಭಾವದ ಪರಿಸ್ಥಿತಿಯ ಲಾಭ ಪಡೆಯಲು ಮಾನ್ಮಾರ್‌ನ ಖಾಸಗಿ ವರ್ತಕರು ದಾಸ್ತಾನು ಹಿಡಿದಿಟ್ಟುಕೊಳ್ಳುವ ಪ್ರಕ್ರಿಯೆ ನಡೆಸಿದರೆ ಅಲ್ಲಿಂದ ಖಾಸಗಿ ವ್ಯಾಪಾರಕ್ಕೆ ತಡೆನೀಡಿ ಸರಕಾರದಿಂದ ಸರಕಾರಿ ಮಟ್ಟದ ಖರೀದಿ ಮಾಡಲು ಚಿಂತನೆ ನಡೆಸಲಾಗುವುದೆನ್ನಲಾಗಿದೆ. ಉದ್ದು, ತೊಗರಿ ಉತ್ಪಾದನೆ ಇಳಿಕೆಯಿಂದ ಪೂರೈಕೆಯಲ್ಲಿ ಅಭಾವವಾಗದೆ, ಸಾಕಷ್ಟು ಪೂರೈಕೆ ಖಾತ್ರಿ ಗೊಳಿಸಲು ಸರಕಾರ ಕ್ರಮ ಕೈ ಗೊಳ್ಳುತ್ತಿದೆಯೆನ್ನಲಾಗಿದೆ.

### 252 ಲಕ್ಷ ಟನ್ ಗೋಧಿ ಖರೀದಿ

ಮೇ 9 ರ ತನಕ ಸರಕಾರಿ ಏಜೆನ್ಸಿಗಳು 252 ಲಕ್ಷ ಟನ್ ಗೋಧಿ ಖರೀದಿ ಮಾಡಿವೆಯೆನ್ನಲಾಗಿದೆ. ಹಿಂದಿನ ವರ್ಷದ ಇದೇ ಅವಧಿಯ ಖರೀದಿ 188 ಲಕ್ಷ ಟನ್‌ಗಳೆನ್ನಲಾಗಿದೆ.

### 366 ಲಕ್ಷ ಟನ್ ಅಕ್ಕಿ ಖರೀದಿ

2022–23 ರ ಖಾರೀಫ್ ಸೀಸನ್‌ದಿಂದ ಮೇ 9 ರ ತನಕ 366 ಲಕ್ಷ ಟನ್ ಅಕ್ಕಿ ಖರೀದಿ ನಡೆಸಲಾಗಿದೆಯೆನ್ನಲಾಗಿದೆ. ಇನ್ನೂ 140 ಲಕ್ಷ ಟನ್ ಅಕ್ಕಿ ಖರೀದಿ ಮಾಡಲಿದೆಯೆನ್ನಲಾಗಿದೆ. ರಾಬಿ ಸೀಸನ್‌ನಿಂದ 106 ಲಕ್ಷ ಟನ್ ಅಕ್ಕಿ ಖರೀದಿಯ ಅಂದಾಜು ಮಾಡಲಾಗಿದೆಯೆನ್ನಲಾಗಿದೆ. ಕೇಂದ್ರ ಎಪ್ರಿಲ್‌ನಲ್ಲಿ ಅಕ್ಕಿ ಹಾಗೂ ಗೋಧಿಯ ಒಟ್ಟು 580 ಲಕ್ಷ ಟನ್ ದಾಸ್ತಾನು ತಲುಪಿದ್ದು ಆಹಾರ ಭದ್ರತೆಯನ್ವಯ ಸರಕಾರ ಆರಾಮದಾಯಕ ಸ್ಥಿತಿಯಲ್ಲಿದೆಯೆನ್ನಲಾಗಿದೆ. ( 310 ಲಕ್ಷ ಟನ್ ಗೋಧಿ ಹಾಗೂ 270 ಲಕ್ಷ ಟನ್ ಅಕ್ಕಿ)

### ಉತ್ತಮ ಬೇಡಿಕೆ ಬ್ಯಾಡಗಿ ಮೆಣಸಿನಕಾಯಿ ದರ ಹೆಚ್ಚಳ

ಉತ್ತಮ ಬೇಡಿಕೆಯಿಂದ ಬ್ಯಾಡಗಿ ಮಾರುಕಟ್ಟೆಯಲ್ಲಿ ಮೆಣಸಿನಕಾಯಿ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಹೆಚ್ಚಿನ ಮಾರುಕಟ್ಟೆಗಳಲ್ಲಿ 70 ಶೇಕಡಾಕ್ಕೂ ಅಧಿಕ ಶೀತಲೀಕೃತ ದಾಸ್ತಾನು ಮಾಡಲಾಗಿದೆಯೆನ್ನಲಾಗಿದೆ. ರಫ್ತು ಹಾಗೂ ದೇಶೀ ಬೇಡಿಕೆಗಳೂ ಅಧಿಕವಿದೆಯೆನ್ನಲಾಗಿದೆ.